ಹಾಡುಗಳಲ್ಲಿ ಕಾಣಿಸಿಕೊಂಡಿವೆ. ನಾಡಿನಲ್ಲಿ ವೈಚಾರಿಕ ಜಾಗೃತಿ, ಭಾಷಾಭಿಮಾನ, ಪ್ರಕೃತಿ ಪ್ರೇಮಗಳನ್ನು ಉದ್ದೀಪಿಸಿವೆ. ಕುವೆಂಪು ಪರಂಪರೆಯನ್ನು ಮುಂದುವರೆಸಿದವರು ಜಿಎಸ್ಸೆಸ್ ಮೊದಲಾದ ಸಮಾಜಮುಖೀಕವಿಗಳು. ನಿಸಾರ್ ಅಹಮದ್, ಎನ್.ಎಸ್.ಎಲ್, ಬಿ.ಆರ್. ಎಲ್, ಚೊಕ್ಕಾಡಿ, ದೊರಂಗೌ ಮೊದಲಾದ ಕವಿಗೀತಕಾರರು ವೈವಿಧ್ಯಮಯವಾದ ಅನುಭವ ಜಗತ್ತನ್ನು ತಮ್ಮ ಗೀತೆಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಕೆ.ಎಸ್.ನ ಗೀತೆಗಳಂತೂ ಎಂದೂ ಮಾಸದ ಮಲ್ಲಿಗೆ ದಂಡೆಗಳಂತಿವೆ. ಜಯಂತ ಕಾಯ್ಕಿಣಿ ಸಿನಿಮಕ್ಕೆ ಹಾಡುಗಳನ್ನು ಬರೆಯ ತೊಡಗಿದ ಮೇಲೆ ಚಿತ್ರಗೀತೆಗಳಿಗೆ ಹೊಸದೊಂದು ವಸಂತಸ್ಪರ್ಶವೇ ಆಯಿತೆನ್ನಬಹುದು. ಈಗೀಗ ಅನೇಕ ತರುಣರು ಸಿನಿಮಾರಂಗಕ್ಕೆ ಪ್ರವೇಶಿಸಿದ್ದು ಉತ್ತಮ ಗುಣಮಟ್ಟದ ಅನೇಕ ಗೀತೆಗಳನ್ನು ಬರೆಯುತ್ತಿದ್ದಾರೆ. ಭಾವಗೀತೆಗಳ ಬಹುಮುಖ್ಯ ಲಕ್ಷಣ ಅವುಗಳ ಜೀವನಮುಖತೆ. ಅವು ನೊಂದವರ ಕಣ್ಣೊರೆಸಿವೆ. ಬೇಸರದ ದಿನಗಳಿಗೆ ಸಂತೋಷದ ಗಳಿಗೆಗಳನ್ನು ಕರುಣಿಸಿವೆ. ಸಮಾಜಕ್ಕೆ ಕ್ರಾಂತಿಯ ಕರೆ ಕೊಟ್ಟಿವೆ (ಸಿದ್ಧಲಿಂಗಯ್ಯನವರ ಹಾಡುಗಳನ್ನು ಗಮನಿಸಿ), ಬಿರಿದ ಭೂಮಿಗೆ ವರ್ಷಸ್ಪರ್ಶಮಾಡಿಸಿವೆ, ನಗಿಸಿವೆ, ಅಳಿಸಿವೆ, ನಾನು ಕೇವಲ ಭಾವಗೀತೆಯಲ್ಲ, 'ಸ್ವಭಾವ ಗೀತೆ' ಎಂದು ರಸಿಕರ ಮನತಣಿಸಿವೆ. ಒಳಲೋಕವನ್ನು ಸಶಕ್ತವಾಗಿ ಹೊರಗುಗೊಳಿಸಿವೆ. ಬೇಂದ್ರೆ, ಕುವೆಂಪು, ಪುತಿನ, ಕೆ.ಎಸ್.ನ ಮೊದಲಾದ ಸವ್ಯಸಾಚಿಗಳು (ಹಾಡು–ಪಾಡು ಎರಡಕ್ಕು ನುಡಿಗೊಟ್ಟವರು) ನನಗೆ ಈವತ್ತಿಗೂ ಹಿರಿದಾದ ಮೇಲ್ಪಂಕ್ತಿ ಕವಿಗಳು. ಅಡಿಗರ 'ಯಾವ ಮೋಹನ ಮುರಲಿ' ಸುಗಮಸಂಗೀತ ಕಾರ್ಯಕ್ರಮದ ಖಾಯಿಶ್ ಗೀತೆ. 'ಎದೆತುಂಬಿ ಹಾಡಿದೆನು', 'ಬಾ ಇಲ್ಲಿ ಸಂಭವಿಸು', 'ತರವಲ್ಲ ತೆಗಿ ನಿನ್ನ ತಂಬೂರಿ', 'ಕರುಣಾಳು ಬಾ ಬೆಳಕೆ', 'ಕೋಡಗನ ಕೋಳಿ ನುಂಗಿತ್ತಾ', 'ಎಲ್ಲಿ ಜಾರಿತೊ', 'ಅಮ್ಮಾ ನಿನ್ನ ಎದೆಯಾಳದಲ್ಲಿ', 'ಲೋಕದ ಕಣ್ಣಿಗೆ', 'ನಿತ್ಯೋತ್ಸವ'–ಇಂಥ ಮಧುರ ಮಂಜುಳ ಭಾವಗೀತೆಗಳ ಪಟ್ಟಿ ಬಹು ದೊಡ್ಡದು. ಇವೆಲ್ಲಾ ಸುಗಮ ಸಂಗೀತ ಕಾರ್ಯಕ್ರಮದಲ್ಲಿ ಅನಿವಾರ್ಯವಾದ ಅಪೂರ್ವ ಗೀತೆಗಳು. ಅಶ್ವತ್ಥ ಶ್ರಾವಣ ಬಂತು ಎಂದು ಬೇಂದ್ರೆಯ ಗೀತೆಯನ್ನು ಹಾಡುವಾಗ, ಅನಂತಸ್ವಾಮಿ ಕುರಿಗಳು ಸಾರ್ ಕುರಿಗಳು ಎಂದು ನಿಸಾರರ ಗೀತೆಯನ್ನು ಹಾಡಿದಾಗ, ರತ್ನಮಾಲಾ ಪ್ರಕಾಶ್ ಯಾವ 'ಮೋಹನ ಮುರಲಿ' ಎಂಬ ಅಡಿಗರ ಸರ್ವಕಾಲಶ್ರೇಷ್ಠ ಗೀತೆಯನ್ನು ಹಾಡಿದಾಗ ಅದಕ್ಕೆ ಕರಗದಂಥ ಕಲ್ಲೆದೆ ಖಂಡಿತ ನನ್ನದಲ್ಲ.

## ಎಚ್.ಎಸ್. ವೆಂಕಟೇಶ ಮೂರ್ತಿ

ಕವಿತೆ, ಕತೆ, ನಾಟಕ, ಪ್ರಬಂಧ, ಕಾದಂಬರಿ, ಮಕ್ಕಳ ಸಾಹಿತ್ಯ, ಅನುವಾದ, ವಿಮರ್ಶೆಯ ಕ್ಷೇತ್ರಗಳಲ್ಲಿ ಕೆಲಸ ಮಾಡಿರುವ ಎಚ್ಚೆಸ್ವಿ ಉತ್ತಮ ಚಿತ್ರ ಗೀತೆಗಳನ್ನೂ ಬರೆದಿದ್ದಾರೆ. ಅವರು ಗೀತೆಗಳನ್ನು ಬರೆದಿರುವ 'ಚಿನ್ನಾರಿ ಮುತ್ತ', 'ಕೊಟ್ರೇಶಿಯ ಕನಸು' ಸಿನಿಮಾಗಳು ಜನಪ್ರಿಯವಾಗಿವೆ. ಅವರು ಹುಟ್ಟಿದ್ದು ಚನ್ನಗಿರಿ ತಾಲ್ಲೂಕಿನ ಹೋದಿಗೆರೆ ಗ್ರಾಮದಲ್ಲಿ. ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತರು.

'ಪರಿವೃತ್ತ', 'ಬಾಗಿಲು ಬಡಿವ ಜನಗಳು', 'ಮೊಖ್ತಾ', 'ಸಿಂದಬಾದನ ಆತ್ಮಕಥೆ', 'ಕ್ರಿಯಾಪರ್ವ', 'ಒಣಗಿದ ಮರದ ಗಿಳಿಗಳು', 'ಋತುವಿಲಾಸ', 'ಎಷ್ಟೊಂದು ಮುಗಿಲು', 'ಅಮೆರಿಕಾದಲ್ಲಿ ಬಿಲ್ಲುಹಬ್ಬ', 'ವಿಮುಕ್ತಿ', 'ಭೂಮಿಯೂ ಒಂದು ಆಕಾಶ', 'ನದೀತೀರದಲ್ಲಿ', 'ಉತ್ತರಾಯಣ ಮತ್ತು...' ಅವರು ಕೆಲವು ಕವನ ಸಂಗ್ರಹಗಳಾಗಿವೆ. ಕನ್ನಡ ಕಾವ್ಯದ ದಿಗಂತಗಳನ್ನು ವಿಸ್ತರಿಸಿದ ಮಹತ್ವದ ಕವಿಗಳಲ್ಲಿ ಎಚ್ಚೆಸ್ವಿ ಒಬ್ಬರು.